ಮೀನುಗಾರಿಕೆ ವ್ಯವಸಾಯದಲ್ಲಿ ತೊಡಗಿರುವ ಸಮಾಜದ ಬಗ್ಗೆ ಹಾಗೂ ಇಲಾಖೆಯಿಂದ ಅವರಿಗೆ ನೀಡುತ್ತಿರುವ ಸಾಲಭ್ಯಗಳ ಬಗ್ಗೆ

೯೮೧. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್(ಸಂಕೇಶ್ವರ).—ಪಶು ಮೀನುಗಾರಿಕೆ ಸಚಿವರು ತಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ವ್ಯವಸಾಯದಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ ಎಷ್ಟು ?

ಆ) ಮೀನುಗಾರಿಕೆ ವ್ಯವಸಾಯದಲ್ಲಿ ತೊಡಗಿರುವ ೩೫೦೦ ರೂಪಾಯಿಗಿಂತ ವಾರ್ಷಿಕ ಆದಾಯ ವಿರುವ ಕುಟುಂಬಗಳ ಸಂಖ್ಯೆ ಎಷ್ಟು ?

ಇ) ಮೀನುಗಾರಿಕೆ ವ್ಯವಸಾಯದ ಅಭಿವೃದ್ಧಿಗಾಗಿ ಸರಕಾರದಿಂದ ವಿಶೇಷ ಡಿಪ್ಲೋಮೋ ವ್ಯಾಸಂಗ ಆಗಲೀ ಅಥವಾ ಪದವಿ ಪರೀಕ್ಷೆ ಏರ್ಪಾಡಿನಲ್ಲಿ ಸರಕಾರದಿಂದ ಸ್ಥಾಪನೆ ಮಾಡಿರುವ ವಿದ್ಯಾ ಸಂಸ್ಥೆಗಳೆಷ್ಟು ? ಹಾಗೂ ಅಲ್ಲಿ ಅಭ್ಯಾಸಿಸಂತ್ತಿರುವ ವಿದ್ಯಾರ್ಥಿಗಳೆಷ್ಟು ?

ಈ) ಮೀನು ಮಾರಾಟದಿಂದ ರಾಜ್ಯಸರಕಾರಕ್ಕೆ ಬರುತ್ತಿರುವ ಎಲ್ಲಾ ತರಹದ ತೆರಿಗೆಯ ಮೊಬಲ ಗೆಷ್ಟು ?

ಶ್ರೀ ಸಿ. ಬೈರೇಗೌಡ (ಮೀನುಗಾರಿಕಾ ಮಂತ್ರಿ ಬಂದರು ಸಚಿವರು).—

ಅ) ೮,೦೨,೩೮೪ ಜನಸಂಖ್ಯೆ

ಆ) ಮೀನುಗಾರರ ಜನಾಂಗದವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಅಧ್ಯಯನವನ್ನು ಈ ತನಕ ಮಾಡಿರುವುದಿಲ್ಲ. ಆದುದರಿಂದ ೩,೫೦೦ ರೂಪಾಯಿಗಳಿಗಿಂತ ಹೆಚ್ಚಿನ ವರಮಾನ ಹೊಂದಿರುವ ಮೀನುಗಾರ ಕುಟುಂಬದ ಸದಸ್ಯ ಸಂಖ್ಯೆಗಳನ್ನು ಗುರುತಿಸಲು ಕಷ್ಟ ಸಾಧ್ಯ.

ಇ) ಒಂದು ವಿದ್ಯಾ ಸಂಸ್ಥೆಯಲ್ಲಿ ವಿಜ್ಞಾನದಲ್ಲಿ ಪದವಿ ಶಿಕ್ಷಣವನ್ನು ನೀಡಲಾಗುತ್ತಿದೆ. ಅದರಲ್ಲಿ ೧೫೭ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಈ) ೧೧.೭೦ ಲಕ್ಷಗಳು.

ಅಧ್ಯಕ್ಷರೇ.—ಮೊದಲ ಪ್ರಶ್ನೆಗೆ ಉತ್ತರವಾಗಿ ''೮,೦೨,೩೮೪ ಕುಟುಂಬಗಳು'' ಎಂದು ಪ್ರಕಟಿಸಿರುವುದನ್ನು ''೮,೦೨,೩೮೪ ಜನಸಂಖ್ಯೆ'' ಎಂದು ತಿದ್ದಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ನಾನು ಕೇಳಿದ್ದೇ ಬೇರೆ ಪ್ರಶ್ನೆ. ಇವರು ಕೊಡುತ್ತಿರುವ ಉತ್ತರವೇ ಬೇರೆ ಇದೆ. ಇಷ್ಟೆಲ್ಲಿ ತಿದ್ದಿಕೊಳ್ಳುವುದು ಸ್ವಾಮಿ ?

ಶ್ರೀ ಸಿ. ಬೈರೇಗೌಡ.—''ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ವ್ಯವಸಾಯದಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ ಎಷ್ಟು'' ? ಎಂದು ಪ್ರಶ್ನೆ ಕೇಳಿದ್ದಾರೆ. ಸಮ್ಮ ಹತ್ತಿರ ಕುಟುಂಬಗಳ ಸಂಖ್ಯೆ ಬಗ್ಗೆ ಲೆಕ್ಕ ಇಲ್ಲ. ಅದು ಇಲ್ಲವೇ ಇರುವುದರಿಂದ ಮೀನುಗಾರಿಕೆ ವ್ಯವಸಾಯದಲ್ಲಿ ತೊಡಗಿರತಕ್ಕ ಜನ ಸಂಖ್ಯೆಯನ್ನು ಕೊಟ್ಟಿದ್ದೇನೆ. ಕುಟುಂಬಗಳ ಸಂಖ್ಯೆ ಬಗ್ಗೆ ಯಾರೂ ಗಣತಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಮಾಡಿಲ್ಲ. ಆ ಒಂದು ಕಾರಣದಿಂದ ಮೀನುಗಾರಿಕೆಯಲ್ಲಿ ತೊಡಗಿರತಕ್ಕವರ ಒಟ್ಟು ಜನಸಂಖ್ಯೆ ಎಷ್ಟು ಎಂಬುದನ್ನು ಕೊಡುತ್ತಿದ್ದೇನೆ. ಆ ರೀತಿ ತಿದ್ದುಪಡಿ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಯಾವ ರೀತಿ ನಾನು ಈ ಬಗ್ಗೆ ವಿಷಾದ ವ್ಯಕ್ತಪಡಿಸಬೇಕೋ ಗೊತ್ತಾಗುತ್ತಿಲ್ಲ, ರಾಜ್ಯದಲ್ಲಿ ಮೀನುಗಾರಿಕಾ ವ್ಯವಸಾಯದಲ್ಲಿ ಎಷ್ಟು ಕುಟುಂಬಗಳು ತೊಡಗಿವೆಯೆಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಜನಸಂಖ್ಯೆ ಹೇಳಿದ್ದಾರೆ. ಈ ಜನಸಂಖ್ಯೆಯಿಂದ ನನಗೇನೂ ಪ್ರಯೋಜನವಾಗುವುದಿಲ್ಲ. ಅವರು ಎಷ್ಟು ಕುಟುಂಬಗಳು ಎಂದು ಹೇಳಿದ್ದರೆ. ವಾರ್ಷಿಕ ವರಮಾನ ರೂ. ೩,೫೦೦ ಒಳಗೆ ಎಷ್ಟು ಕುಟುಂಬಗಳು ಬರುತ್ತವೆ ಅವಕ್ಕೆ ಏನೂ ಮಾಡಿಲ್ಲ

ವೆಂದು ಹೇಳಬಹುದಿತ್ತು. ಆದರೆ ಅವರ ಉತ್ತರದಲ್ಲಿ ವಿಮಾನುಗಾರರ ಕುಟುಂಬದ ಸದಸ್ಯ ಸಂಖ್ಯೆ ಗಳನ್ನು ಗುರುತಿಸಲು ಕಷ್ಟಸಾಧ್ಯವೆಂದಿದ್ದಾರೆ. ಈ ಜನಾಂಗದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಅಧ್ಯಯನವನ್ನು ಈ ತನಕ ಮಾಡಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಅಧ್ಯಯನ ಮಾಡುವುದು ಯಾವಾಗ ? ಇವರಿಗೆ ಏನು ಅನುಕೂಲಗಳನ್ನು ಒದಗಿಸುತ್ತೀರಿ ? ಈ ಕುಟುಂಬಗಳಿಗೆ ಏನು ಆರ್ಥಿಕ ನೆರವು ಕೊಡಲಾಗಿದೆ ? ೩೫೦೦ ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವ ಕುಟುಂಬಗಳ ಬಗ್ಗೆ ತಮ್ಮ ಇಲಾಖೆ ಅಧ್ಯಯನವನ್ನೇ ಮಾಡದ ಮೇಲೆ ಇನ್ನೇನು ಕೆಲಸವನ್ನು ಮಾಡುತ್ತದೆ ? ಇನ್ನು ಮಂಜಾರನೇಯ ಪ್ರಶ್ನೆಗೆ ೧೫೭ ವಿದ್ಯಾರ್ಥಿಗಳು ಒಂದು ವಿದ್ಯಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡು ತ್ತಿದ್ದಾರೆಂದು ಹೇಳಿದ್ದೀರಿ. ಆ ವಿದ್ಯಾ ಸಂಸ್ಥೆ ಎಲ್ಲಿದೆ ಹಾಗೂ ಆ ೧೫೭ ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಎಷ್ಟು ಮಂದಿ ಇದ್ದಾರೆ ? ಹಾಗೂ ಮಿನು ಮಾರಾಟದಿಂದ ಬರತಕ್ಕ ತೆರಿಗೆ ಹಣ ೧೧.೭೦ ಲಕ್ಷ ಎಂದು ಹೇಳಿದ್ದೀರಿ. ಈ ಹಣವನ್ನು ಯಾವ ಅಭಿವೃದ್ಧಿಗಾಗಿ ಉಪಯೋಗ ಮಾಡುತ್ತಿದ್ದೀರಿ ? ಈ ಬಗ್ಗೆ ಮಾನ್ಯ ಮಂತ್ರಿ ಗಳು ವಿವರಣೆ ನೀಡಬೇಕು.

ಶ್ರೀ ಸಿ. ಭೈರೇಗೌಡ.—ಮಾನ್ಯ ಸದಸ್ಯರು ಕುಟುಂಬಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಕುಟುಂಬಗಳ ಸಂಖ್ಯೆಯನ್ನು ಹೇಳುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈ ವೃತ್ತಿಯಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆಯನ್ನು ನಾನು ಕೊಟ್ಟಿದ್ದೇನೆ. ಇದನ್ನು ಅರ್ಥಮಾಡಿ ಕೊಳ್ಳದೆ ಈ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುವುದಾದರೆ. ಇದಕ್ಕೆ ಏನು ಉತ್ತರ ಹೇಳಲಿ. ಈ ವಿಮಾನುಗಾರಿಕೆ ಕೆಲಸವನ್ನು ಮಾಡತಕ್ಕ ಕುಟುಂಬಗಳು ಎಷ್ಟು ಮತ್ತು ಅವರ ವರಮಾನ ಎಷ್ಟು ? ಎನ್ನುವ ಬಗ್ಗೆ ಅಧ್ಯಯನ ಮಾಡಲು ಒಂದು ಸ್ಪಡಿ ಎಕನಾಮಿಕ್ಸ್ ಸರ್ವೆ ಮಾಡಬೇಕೆಂದು ಬೆಂಗಳೂರಿನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯೋ ಎಕನಾಮಿಕ್ ಸರ್ವೆ ಇವರ ಜೊತೆ ಮಾತನಾಡಿ ಸರ್ಕಾರ ತೀರ್ಮಾನಿಸಿದೆ. ಅವರು ಇದರ ಬಗ್ಗೆ ಅಧ್ಯಯನ ನಡೆಸಲಿದ್ದಾರೆ. ಅವರಿಂ ತಮ್ಮ ವರದಿಯನ್ನು ಕೊಟ್ಟ ಮೇಲೆ ಅದನ್ನು ತಮಗೆ ಒದಗಿಸುತ್ತೇನೆ.

ಇನ್ನು ಮಂಗಳೂರಿನಲ್ಲಿರತಕ್ಕ ವ್ಯವಸಾಯ ವಿಶ್ವವಿದ್ಯಾನಿಲಯದವರು ೧೫೭ ಜನರಿಗೆ ತರಬೇತಿ ಯನ್ನು ಕೊಡುತ್ತಿದ್ದಾರೆ. ಇನ್ನೂ ಹೆಚ್ಚಿನ ಮಾಹಿತಿಗಳನ್ನು ವ್ಯವಸಾಯ ವಿಶ್ವವಿದ್ಯಾನಿಲಯದವರು ಒದಗಿಸಬೇಕಾಗುತ್ತದೆ. ಅದನ್ನು ನಾನು ಕೊಡುವುದಕ್ಕಾಗುವುದಿಲ್ಲ. ವಿಮಾನು ಮಾರಾಟದಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಎಲ್ಲಾ ತರಹದ ತೆರಿಗೆಯ ಮೊಬಲಗೆಷ್ಟು? ಎಂದು ಮಾನ್ಯ ಸದಸ್ಯರು ಕೇಳಿ ದ್ದಾರೆ. ಈ ಎಲ್ಲಾ ಬಾಬಿನಿಂದ ೧೧.೭ ಲಕ್ಷ ರೂಪಾಯಿಗಳು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದೆ. ಈ ಹಣವನ್ನು ನಾವು ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗ ಮಾಡುತ್ತಿದ್ದೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸ್ವಾಮಿ, ಇದು ರಾಜ್ಯದಲ್ಲಿರತಕ್ಕ ಜನಸಾಮಾನ್ಯರ ಪ್ರಶ್ನೆ, ಆದ್ದರಿಂದ ನಾನು ಕೇಳುತ್ತಿದ್ದೇನೆ. ೧೫೭ ಜನ ವಿದ್ಯಾರ್ಥಿಗಳು ಏನು ತರಬೇತಿಯನ್ನು ಪಡೆಯು ತ್ತಿದ್ದಾರೆ ಅವರು ಯಾವ ಯಾವ ಜಾತಿಗಳಿಗೆ ಸೇರಿದವರು ಎಂಬುದನ್ನು ನೀವು ಹೇಳುವುದಕ್ಕಾಗದಿದ್ದರೆ ಈ ಖಾತೆಯ ಮಂತ್ರಿಗಳಾಗಿ ನೀವು ಏತಕ್ಕೆ ಇರಬೇಕು? ನಾವು ಕೇಳಬೇಕಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲವೆಂದು ಹೇಳುವುದಾದರೆ ಇದರಿಂದ ಏನು ಪ್ರಯೋಜನ? ನಿಮ್ಮ ಹತ್ತಿರ ಮಾಹಿತಿ ಇಲ್ಲದಿದ್ದರೆ ಇಲಾಖೆಯಿಂದ ತರಿಸಿ ಹೇಳಬೇಕು. ಈ ವಿಮಾನುಗಾರಿಕೆ ಮಾಡತಕ್ಕ ಜನರಿಗೆ ತಾವು ಇಲಾಖೆಯ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದ್ದೀರಿ ಎಂಬು ದನ್ನು ಹೇಳುತ್ತೀರಾ? ತಾವು ಹೇಳಿದ ಸೋಷಿಯೋ ಎಕನಾಮಿಕ್ ಸರ್ವೆಯ ಕಾರ್ಯವನ್ನು ನಾನು ಪ್ರಶ್ನೆ ಕೇಳಿದಮೇಲೆ ಹಾಕಿಕೊಂಡಿರೋ ಅಥವಾ ನಾನು ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲೇ ಹಾಕಿ ಕೊಂಡಿದ್ದೀರೋ ಈ ಜನರ ಕಲ್ಯಾಣಕ್ಕೋಸ್ಕರ ಕೇಂದ್ರ ಸರ್ಕಾರದಿಂದ ಏನಾದರೂ ಹಣ ಬರುತ್ತಿದೆಯೆ? ಎಂಬುದನ್ನು ತಿಳಿಸುತ್ತೀರಾ?

ಶ್ರೀ ಸಿ. ಭೈರೇಗೌಡ.—ನಾನು ಮಂತ್ರಿಯಾದ ಮೇಲೆ ಈ ಸರ್ವೆ ಕಾರ್ಯವನ್ನು ಹಾಕಿಕೊಂಡಿ ದ್ದೇನೆ. ಆದರೆ ಈ ಸರ್ವೆ ಕಾರ್ಯವನ್ನು ಹಾಕಿಕೊಳ್ಳುವ ಬಗ್ಗೆ ಮಾನ್ಯ ಮಲ್ಲಾರಗೌಡ ಪಾಟೀಲರಿಂದ ನಾನೇನೂ ಕಲಿಯಬೇಕಾಗಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಲ್ಲಾರಗೌಡ ಪಾಟೀಲರಿಂದ ನಾನು ಏನೂ ಕಲಿಯ ಬೇಕಾಗಿಲ್ಲ ಈ ಸರ್ವೆ ಕಾರ್ಯಕ್ಕೆ ನಾನು ಈ ಮೊದಲೇ ವ್ಯವಸ್ಥೆ ಮಾಡಿದ್ದೇನೆಂದು ತಾವು ಮೊದಲೇ ಹೇಳಬೇಕಾಗಿತ್ತು.

ಶ್ರೀ ಎ. ಬೈರೇಗೌಡ.—ನೀವು ಪ್ರಶ್ನೆಯನ್ನು ಕೇಳಿದ ಮೇಲೆ ನಾವು ಸರ್ವೆ ಕಾರ್ಯಕ್ಕೆ ಯೋಜನೆ ಹಾಕಿಕೊಂಡಿದ್ದರೆ ನೀವು ನಮ್ಮನ್ನು ಕೇಳಬಹುದಿತ್ತು. ಆದರೆ ಈ ಮೊದಲೇ ನಾವು ಸರ್ವೇ ಕಾರ್ಯಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈ ಕಾರ್ಯವನ್ನು ಯಾವರೀತಿ ಮಾಡಬೇಕೆಂದು ತೀರ್ಮಾನ ಮಾಡಬೇಕಾಗಿದೆ ಅದನ್ನು ತೀರ್ಮಾನಿಸಿ ಅವರಿಗೆ ಒಪ್ಪಿಸುತ್ತೇವೆ. ಅವರ ವರದಿ ಏನು ಬರುತ್ತದೆ ಅದನ್ನು ನೋಡಿ ಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ನಂದಳಿಕೆಯಂ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿಗಳಿಗೆ ವಸತಿ ಸೌಕರ್ಯ ಒದಗಿಸುವುದು.

*೩೬೪. ಶ್ರೀಮತ ವಸಂತಿ ವಿ. ಸಾಲಿಯಾನ (ಕಾಪು).—ಮಾನ್ಯ ವಸತಿ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದಳಿಕೆಯಂ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಯೋಜನೆ ಸರ್ಕಾರದವರ ಮುಂದಿದೆಯೆ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)—

ಅ) ಇದೆ.

ಆ) ಬೇಕಾದ ಹಣವು ಲಭ್ಯವಾದಾಗ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಹಲವಾರು ಆರೋಗ್ಯ ಘಟಕಗಳಿದ್ದು ಅಲ್ಲಿ ಎಲ್ಲಿಯೂ ಕೂಡ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯ ಇರುವುದಿಲ್ಲ. ಆದ್ದರಿಂದ ಆರೋಗ್ಯಾಧಿಕಾರಿಗಳು ಮತ್ತು ಬೇರೆ ಸಿಬ್ಬಂದಿ ವರ್ಗದವರನ್ನು ಸರ್ಕಾರದವರು ಅಲ್ಲಿಗೆ ವರ್ಗಾವಣೆ ಮಾಡಿದರೆ ಯಾರೂ ಕೂಡ ಬರುವುದಿಲ್ಲ. ಇನ್ನು ಮೇಲಾದರೂ ನನ್ನ ಕ್ಷೇತ್ರದಲ್ಲಿರುವ ಆರೋಗ್ಯ ಘಟಕಗಳ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ನಮ್ಮಲ್ಲಿ ೧೩೦೮ ಆರೋಗ್ಯ ಘಟಕಗಳಿದ್ದು ಇವುಗಳ ಪೈಕಿ ೧೨೦೦ ಘಟಕಗಳಲ್ಲಿ ವಸತಿ ಸೌಕರ್ಯವಿಲ್ಲ. ತಾವು ಇರತಕ್ಕ ಕೊಂದರೆಯನ್ನು ಏನು ಹೇಳುತ್ತಿದ್ದೀರಿ ಇದು ನನ್ನ ಗಮನದಲ್ಲಿದೆ, ಇದರಿಂದಾಗಿ ಅಂಥ ಕಡೆಗಳಿಗೆ ಆರೋಗ್ಯ ಅಧಿಕಾರಿಗಳನ್ನಾಗಲಿ ಅಥವಾ ಬೇರೆ ಸಿಬ್ಬಂದಿ ವರ್ಗವನ್ನಾಗಲಿ ಹಾಕಿದರೆ ಯಾರೂ ಕೂಡ ಹೋಗುವುದಿಲ್ಲವೆಂಬ ಅಂಶವೂ ನನಗೆ ಗೊತ್ತಿದೆ. ಇದನ್ನು ಗಮನಿಸಿ ಬ್ಯಾಂಕ್ ಮತ್ತು ಹುಡ್ಕೋ ನೆರವಿನಿಂದ ಸಾಲಗಳನ್ನು ಪಡೆದು ಪೆಡಿಕಲ್ ಆಫೀಸರ್ಸ್‌ಗೆ ಒಂದೊಂದು, ಪೆಲ್ತ್ ವರ್ಕರ್ಸ್ ಮತ್ತು ಎ.ಎನ್.ಎಂ. ಗಳಿಗೆ ಒಂದೊಂದು ಹಾಗೂ ಲೀನೇ ದರ್ಜೆ ನೌಕರರಿಗೆ ಒಂದೊಂದು ವಸತಿ ಸೌಕರ್ಯಕ್ಕೆ ಕಟ್ಟಡಗಳನ್ನು ಕಟ್ಟಿಸಿಕೊಡ ಬೇಕೆಂದು ತೀರ್ಮಾನಿಸಿದ್ದೇವೆ, ಬ್ಯಾಂಕು ಮತ್ತು ಹುಡ್ಕೋನಿಂದ ಬರತಕ್ಕ ಸಾಲದ ಹಣವನ್ನು ನೋಡಿಕೊಂಡು ಪ್ರತಿವರ್ಷ ಇಂತಿಷ್ಟು ವಸತಿಗೃಹಗಳನ್ನು ಕಟ್ಟಿಸಲು ಯೋಜನೆ ಹಾಕಿಕೊಂಡಿದ್ದೇವೆ.

ಶ್ರೀ ವಸಂತ ವಿ. ಸಾಲಿಯಾನ.—ಸ್ವಾಮಿ, ನನ್ನ ಕ್ಷೇತ್ರದಲ್ಲಿರುವ ನಂದಳಿಕೆಗೆ ಆದರೂ ಒಂದು ವಸತಿ ಗೃಹವನ್ನು ಈ ವರ್ಷವೇ ಕೊಡಲು ಕ್ರಮ ತೆಗೆದುಕೊಳ್ಳುತ್ತೀರಾ? ಇದೇ ಅಲ್ಲದೆ ಕಾಪು, ಪಡುಬಿದ್ರಿ, ಶಿರ್ವ ಇನ್ನೂ ಮುಂತಾದ ಕಡೆಗಳಲ್ಲಿ ವಸತಿ ಗೃಹಗಳ ತೊಂದರೆ ಬಹಳ ಇರುವುದರಿಂದ ಇದನ್ನು ಬಜೆಟ್‌ನಲ್ಲಿ ಸೇರಿಸುತ್ತೀರಾ?

ಶ್ರೀ ಜೆಚ್. ಎಲ್. ತಿಮ್ಮೇಗೌಡ.—ಇದನ್ನು ಬಜೆಟ್‌ನಲ್ಲಿ ಸೇರಿಸಬೇಕಾದ ಪ್ರಮೇಯ ಏನೂ ಇಲ್ಲ. ನಾನು ಈಗಾಗಲೇ ಹೇಳಿದಂತೆ ಬ್ಯಾಂಕ್ ಮತ್ತು ಹುಡ್ಕೋದಿಂದ ಸಾಲ ಸಿಕ್ಕಿದ ಕೂಡಲೇ ವಸತಿ ಗೃಹಗಳನ್ನು ಕಟ್ಟಿಸಲು ಕ್ರಮ ಕೈಗೊಳ್ಳುತ್ತೇವೆ.